Founded 1917 ॥ श्री ॥ Regd No- M 1299

ಸತ್ಯವಾದಿ

ಆರಮನೆ ವಿದ್ವಾನ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು

Proprietors— Satyavadi Ltd, Mysore

ಸಂಪುಟ ೨೫] [ಸಂಚಿಕೆ ೧೭ 24-12-41 ಬಿಡಿ ಪ್ರತಿ ೪ ಪೈ

SATYAVADI

From 26-12-41 NEW OPERA TALKIES

DAILY 3 SHOWS (THE BEAUTY SPOT OF MYSORE)

SIKANDAR

MINERVA'S GOLD - LEAF ANCIENT HISTORY

CAST—(Porus) Sohrab Modi, (Alexander) Prithviraj (Rukhsana) Vanamala Meena, Sheela. Sadiq Ali, Zahur Raja, Shakir, K. N. Singn, Jillo Boi, Lalo Yakub. Gajendra and others Supported by hudreds and thousands

The Picture that was so anxiously awaited

SIKANDAR

The scarlet pages of history record a flaming event of two thousand and odd years back which thrilled the world then and is even to-day remembered with awe and reverence. Alexander af Greece with tremendous force was pushing his vehement and unhampered onward march conquering country after countrv and smashing everything that came in his way. Victory accompanied him wherever he went and the realization of his dream of world conquest was in sight, With impatient eyes, he looked forward to the day when the entire world would lie at his feet and acclaim him the great conqueror.

He blitzed Iran and conquered it but in that land of beauty he met with the first defeat of his life-time. The captivating beauty of an Iranian damsel, Rukhsana by name, made the conqueror a captive. The conqueror thus found himself conquered.

Aristotle, Alexander's guide and philosopher, visualized beauty's powers and youths weaknesses. He had accompanied Alexander upto Iran. Conversant as he was with the ways of the world and vicissitudes of life, he advised Alexander to beware of woman who was the greatest weakness of men. He declared "whosoever enters the world of women invites ruin on himself. Alexander, if you want to conquer the world keep away from their domain."

(See the Rest on the Silver Screen)

QUALITY MILK & MILK Products

From Citizens Dairy, Old Post Office Road, Mysore.

ಪತ್ತೇದಾರಿ ಕಾದಂಬರಿ—ಲೇಖಕರು—ಗುಂಡ್ಮಿ ಸದಾಶಿವಭಟ್ಟ.

"ಅದ್ಭುತ ಸಾಹಸ"

(ಈ ಗ್ರಂಥದ ಸಕಲ ಹಕ್ಕುಗಳು ಸತ್ಯವಾದಿ ಆಫೀಸಿಗೆ ಸೇರಿದೆ)

(ಕಳೆದ 3 12 41ನೇ ಸಂಚಿಕೆಯಿಂದ ಮುಂದುವರಿದುದು)

ತಕ್ಷಣವೇ ಶರ್ಟ್, ಸೋಡಾ, ಮತ್ತು ಒಂದು ಶರಾಬಿನ ಸೀಸೆ, ಇವೆಲ್ಲವೂ ಮಿ॥ ಬ್ಲೇಕನೆದುರಿಗೆ ಮೇಜಿನ ಮೇಲೆ ಕಂಗೊಳಿಸಿದವು. ಮಿ॥ ಬ್ಲೇಕನು ತನ್ನ ಗ್ಲಾಸಿಗೆ ಶರಾಬನ್ನು ಸುರಿದುಕೊಂಡು ಸ್ವಲ್ಪ ಮೆಲ್ಲಗೆ ಮಜಿಯನ್ನು ಕುರಿತು "ನೋಡು, ಮಜೀ! ಸತ್ಯಸ್ಥಿತಿಯೇನೆಂದರೆ, ನಾನು ನಿನ್ನ ಹತ್ತಿರ ಸ್ವಲ್ಪ ಏಕಾಂತದಲ್ಲಿ ಮಾತನಾಡಲಪೇಕ್ಷಿಸುತ್ತೇನೆ. ನಾನು ಏನನ್ನು ಹೇಳಬಯಿಸುವೆನೋ, ಅದು ಏನ್ಸಿಗೆ ಗೊತ್ತಾಗಬಾರದೆಂಬುದನ್ನು ನೆನಪಿನಲ್ಲಿಡು. ಈಗ ನೀನು ಸ್ವಲ್ಪ ಗಟ್ಟಿಯಾಗಿ ನ್ಯೂಯಾರ್ಕಿನ ಗೆಳೆಯರ ವಿಚಾರದಲ್ಲಿಯೇ ನನ್ನೊಡನೆ ಮಾತಾಡು. ಯಾಕೆಂದರೆ, ಏನ್ಸಿಯು ಬಾಗಿಲಿನ ಇನ್ನೊಂದು ಕಡೆಯಿಂದ ಕಿವಿಗೊಟ್ಟು ನಮ್ಮ ಮಾತನ್ನು ಕೇಳಲು ಪ್ರಯತ್ನಿಸುತ್ತಿರಬಹುದು" ಎಂದು ಪಿಸುಗುಟ್ಟಿದನು.

ಮಜಿಯು ಗಟ್ಟಿಯಾಗಿ ನಕ್ಕು "ಸರಿ, ಸರಿ, ಈಗ ನಾನು ನಿನ್ನನ್ನು ಜೆನ್ನಾಗಿ ಗುರುತಿಸಿದೆನು. ಹೇಳು. ಕೆನೇಡಿಯ ಕ್ಷೇಮವಷ್ಟೇ? ನಾನು ನಿನ್ನನ್ನು ಹಾರ್ಲಮಿನ ಒ೦ಬೆಂಟ್ ಹೋಟಲಿನಲ್ಲಿ ಕೆನೇಡಿಯ ಸಂಗಡ ನೋಡಿರುವೆನು!" ಎಂದು ಗಟ್ಟಿಯಾಗಿ ನುಡಿದನು.

ಮಿ॥ ಬ್ಲೇಕನೂ ಅದೇ ರೀತಿಯಲ್ಲಿ ಗಟ್ಟಿಯಾಗಿ "ಭಲಾ! ನೀನು ಸರಿಯಾಗಿ ಗುರುತಿಸಿದಿ; ಒಂಭತ್ತರವ್ಯವಾಪ ರಾತ್ರಿ ಇದ್ದಿತು ಅದು!" ಎಂದು ಆತನಿಗೆ ಉತ್ತರಕೊಟ್ಟನು.

ಮಜಿ— ಜಿನೋವಾವಲ್ಲಿ ನೀನು ಇನ್ನೂ ಕೆಲವು ದಿನಗಳು ನಿಲ್ಲಬೇಕಾಗಬಹುದಲ್ಲವೇ?

ಬ್ಲೇಕ್— ನಾಳೆನರೆಗೆ ಮಾತ್ರ. ನಾನೀಗ ಸಮುದ್ರದಲ್ಲಿ ಸ್ವಲ್ಪ ವಿಹಾರ ಮಾಡಿಕೊಂಡು ಬರುವುದಕ್ಕಾಗಿ ನ ನೆಯಿಂದ ಹೊರಟಿರುವೆನು. ಹೇಳು, ಏನಾದರೂ ಹೊಸ ವರ್ತಮಾನಸುದ್ದರೆ;

ಮಜಿ—ಸಮಯವಿದ್ದರೆ ಬಾ. ಸ್ವಲ್ಪ ಹೊತ್ತು ಏನಾದರೂ ಆಟವಾಡಿ ಮನಸ್ಸನ್ನು ಸಂತೋಷಪಡಿಸಿಕೊಳ್ಳೋಣ.

ನನ್ನದೇನೂ ಅಪ್ಪೇಕವಿಲ್ಲ. ಎಂದು ಹೇಳಿ ಮಿ॥ ಬ್ಲೇಕನು ತನ್ನ ಸ್ಥಳದಿಂದೆದ್ದು ನಿಂತು ಮಜಿಯನ್ನು ಅನುಸರಿಸುತ್ತಾ, ಪಕ್ಕದ ಕೋಣೆಯನ್ನು ಹೊಕ್ಕನು. ಅಲ್ಲಿ ಅನೇಕರು ಕುಳಿತು ಆನಂದದಿಂದ ವಿಹರಿಸುತ್ತಿದ್ದರು. ಮಜಿಯು ಬ್ಲೇಕನನ್ನು ಕರೆದುಕೊಂಡು ಒಳಿಯ ಬಾಗಿಲೊಂದರಿಂದ ಮನೆಯ ಒಳಭಾಗಕ್ಕೆ ನಡೆದನು.

ಒಳಭಾಗದಲ್ಲಿ ಬಂದು ಜಗಲಿ ಇದ್ದಿತು ಅದರಲ್ಲಿ ಇವರು ಮುಂದುವರಿದರು. ಸ್ವಲ್ಪ ದೂರ ಹೋದ ಬಳಿಕ ಮಜಿಯು ನಿಂತು ಬಲಗಡೆಯಲ್ಲಿರುವ ಕೋಣೆಯೊಂದರ ಬಾಗಿಲನ್ನು ತೆರೆದು ಬ್ಲೇಕನಿಗೆ ಒಳಗೆ ಹೋಗಲು ಹೇಳಿದನು. ಆ ಕೋಣೆಯು ಸಣ್ಣದಾಗಿದ್ದರೂ ಬಹಳ ಸುಂದರವಾಗಿ ಶೃಂಗರಿಸಲ್ಪಟ್ಟಿದ್ದಿತು. ಒಂದು ದೊಡ್ಡ ಮೇಜು ಕೋಣೆಯ ನಡುವೆ ಇಡಲ್ಪಟ್ಟಿದ್ದಿತು. ಅದರ ಸುತ್ತಲೂ ಎಂಟು-ಹತ್ತು ಕುರ್ಚಿಗಳು ಕ್ರಮವಾಗಿ ಸಜ್ಜುಗೊಳಿಸಲ್ಪಟ್ಟಿದ್ದವು

ಒಂದು ಸಾರಿ ಮಜಿಯು ಬಾಗಿಲಿಂದ ಹೊರಗೆ ಬಂದು ಜಗಲಿಯ ಮೇಲೆ ದೃಷ್ಟಿಯನ್ನು ಬೀರಿದನು. ಆ ಮೇಲೆ ಒಳಹೊಕ್ಕು ಕೋಣೆಯ ಬಾಗಿಲನ್ನು ಹಾಕಿ ಅವನು ಮಿ॥ ಬ್ಲೇಕನ ಬಳಿಗೆ ಬಂದು ಕುಳಿತು, ಕೂಡಲೇ "ಅಯ್ಯೋ ಇನ್ನು ತಡಮಾಡುವ ಅಗತ್ಯವಿಲ್ಲ. ಏನು ಹೇಳಬೇಕಾಗಿರುವುದೋ, ಅದೆಲ್ಲವನ್ನೂ ಬೇಗನೆ ಹೇಳಿಬಿಡು" ಎಂದು ನುಡಿದನು.

ಮಜಿಯು ಮಾತಿಗೆ ಉತ್ತರ ಕೊಡುವ ಮೊದಲು ಮಿ॥ ಬ್ಲೇಕನು ಕುರ್ಚಿಯನ್ನು ಹತ್ತಿರ ಎಳೆದುಕೊಂಡು ಕುಳಿತ, ಸಿಗರೇಟನ್ನು ಹಚ್ಚುತ್ತಾ "ಕೇಳು ಮಜೀ! ನಿನ್ನ ಹತ್ತಿರ ಯಾವ ಮಾತನ್ನೂ ಆಡುವುದಕ್ಕಿಂತ ಮುಂಚೆ ನಾನು ಇದನ್ನು ನಿನಗೆ ಹೇಳಲಿಚ್ಛಿಸುತ್ತೇನೆ— ನಾನಿಲ್ಲಿಗೆ ಯಾವ ವಿಧವಾದ ಆಯುಧವನ್ನೂ ತೆಗೆದುಕೊಳ್ಳದೆ ಬಂದಿರುವೆನು. ನೀನು ಎಡದ ಕೈಯನ್ನು ಪುನಃಪುನಃ ಜೇಬಿನ ಕಡೆಗೆ ತೆಗೆದುಕೊಳ್ಳುವುದಾಗಲಿ ಅಗತ್ಯವಿಲ್ಲ. ನಿನ್ನ ಜೇಬಿನಲ್ಲಿ ಪಿಸ್ತೂಲಿದೆ ಎಂಬುದು ನನಗೆ ಗೊತ್ತಿದೆ. ಅಲ್ಲದೆ, ಅಲ್ಪ ಮಾತಿಗೇ ನೀನಿದನ್ನು ಹೊರಗೆ ತೆರೆಯುವ ಸಿದ್ಧತೆಯಲ್ಲಿರುವೆ ಎಂಬುದನ್ನು ನಾನು ತಿಳಿದಿರುವೆದು. ನಿಜವಾಗಿ ಈಗ ನಿನಗದರ ಅಗತ್ಯವೇ ಬೇಳಲಾರದು. ಇಷ್ಟರಮೇಲೂ ನೀನದನ್ನು ಉಪಯೋಗಿಸುವಿಯಾದರೆ. ನೀನು ನಿನ್ನ ಆ ಕೆಲಸಕ್ಕಾಗಿ ಪಶ್ಚಾತ್ತಾಪ ಪಡಬೇಕಾದೀತು. ಕಾರಣವೇನೆಂದರೆ, ಈ ವಿಷಯದಲ್ಲಿ ಸಂಪೂರ್ಣ ವ್ಯವಸ್ಥೆಗೊಳಿಸದೇ ನಾನಿಲ್ಲಿಯವರೆಗೆ ಬರುವ ಕ್ಷತಿತೊಂದರೆ ವಹಿಸಿಲ್ಲ" ಎಂದು ಪ್ರಕಾಶಪಡಿಸಿದನು.

ಅದಕ್ಕೆ ಮಜಿಯು ತುಂಬಾ ಶಾಂತಭಾವದಿಂದ "ನಿನ್ನ ಈ ಮಾತುಗಳಿಗೆ ಅರ್ಥವೇನೆಂದು ನನಗೆ ತಿಳಿಯುವದಿಲ್ಲ. ಮೊದಲು ನೀನಿಲ್ಲಿಗೆ ಬಂದು ನನ್ನ ಮಿತ್ರನೆಂದು ಹೇಳಿ ಪರಿಚಯವನ್ನಿತ್ತೆ. ಹಾಗೂ ನನ್ನನ್ನು ನೋಡುವ ಇಚ್ಛೆಯನ್ನು ಪ್ರಕಟಿಸಿದೆ ಸಂದರ್ಶಿಸಿದ ಒಳಿಕ ನನಗೆ ನೀನು ವಾಸ್ತವದಲ್ಲಿ ಪರಿಚಿತನಲ್ಲವೆಂದು ತಿಳಿಯಿತು. ನೀನು ಯಾವ ಆಲೋಚನೆಯಿಂದ ನನ್ನ ಬಳಿಗೆ ಬಂದಿರುವಿ ಎಂಬುದನ್ನು ಮೊದಲು ನಾನು ಅರಿಯಲಪೇಕ್ಷಿಸುತ್ತೇನೆ" ಎಂದನು.

ಬ್ಲೇಕ್—ನಾನು ನಿನ್ನ ಒಳಿಗೆ ಬಂದು ಸಂಗತಿಯನ್ನು ತಿಳಿಯುವ ಉದ್ದೇಶದಿಂದ ಬಂದಿರುವೆನು, ಡೇವೋ! ಯಾಕೆಂದರೆ, ಕಾರ್ಡೋನನು ನನಗೆ ಆ ಮಾತನ್ನು ಎಂದಿಗೂ ತಿಳಿಸಲಾರನೆಂದು ನನಗೆ ತಿಳಿದಿದೆ.

ಮಜಿ— ಹಾಗೋ, ಒಳ್ಳೆಯದು. ಯಾವುದನ್ನು ನಿನಗೆ ತಿಳಿಸಲು ಕಾರ್ಡೋನನು ನಿರಾಕರಿಸಿದಲ್ಲನೋ, ಆ ಮಾತನ್ನು ನಾನೂ ನಿನಗೆ ತಿಳಿಸಲು ಸರ್ವಥಾ ಸಿದ್ಧನಿಲ್ಲವೆಂಬುದನ್ನು ನೀನು ತಿಳಿದುಕೊಳ್ಳಬೇಕಾಗುವುದು. ಆತನ ಇಚ್ಛೆಗೆ ವಿರುದ್ಧವಾಗಿ ಯಾವ ಕೆಲಸವನ್ನು ಮಾಡುವುದಕ್ಕೂ ನಾನು ಸಿದ್ಧನಿಲ್ಲ.

ಬ್ಲೇಕ್— ಇರಲಿ, ಈ ಮಾತುಗಳ ಅಗತ್ಯವಿಲ್ಲ. ಇದರ ತೀರ್ಮಾನವನ್ನು ನೀನು ನನ್ನ ಮಾತನ್ನು ಕೇಳಿದ ಒಳಿಕವೇ ಮಾಡಬೇಕಾಗುವುದು.

ಮಜಿ— ಸರಿ, ಏನು ಹೇಳಬೇಕೋ ಅದನ್ನು ಬೇಗ ಹೇಳಿಬಿಡು. ಯಾಕೆಂದರೆ, ಏನ್ಸಿಯು ಈ ಕಡೆಗೆ ಒರತ್ತಲೇ ಇರಬಹುದು. ನಾನು ಆತನೊಂದಿಗೆ ಯಾವ ಮಾತನ್ನೂ ಗುಟ್ಟಾಗಿಡಲು ಸಿದ್ಧನಿಲ್ಲ.

ಬ್ಲೇಕ್— ಕೇಳು, ಡೇವೋ! ಈ ವಿಷಯದಲ್ಲಿ ನೀನು ಹಾಗೆಂದಿಗೂ ಮಾಡಲಾರೆ. ಒಬ್ಬನು ಮತ್ತೊಬ್ಬನಿಗೆ ಕೇಡು ಮಾಡುವುದರಿಂದ ನಮ್ಮೊಳಗೆ ಯಾರಿಗೂ ಲಾಭವಾಗುವ ಸಂಭವವಿಲ್ಲ. ಇರಲಿ. ಕಾರ್ಡೋನನೊಂದಿಗೆ ಒಂದು ಗುಟ್ಟಿನ ಆಲೋಚನೆಯನ್ನು ಮಾಡಿಕೊಂಡ ಹಸ್ಟನ್ ರೇಮರನು ಈಗ ಯಾವ ಸ್ಥಿತಿಯಲ್ಲಿ ಜಿನೋವಾದಿಂದ ಹೊರಗೆ ತೆರಳುವನು? ಇದನ್ನು ತಿಳಿಯುವದಕ್ಕಾಗಿಯೇ ನಿನ್ನ ಒಳಿಗೆ ಬಂದಿರುವೆನು.

ಮಜಿ— ಹೋ ಹೋ! ಈಗ ನಾನು ತಿಳಿದೆ. ಶಾಬಾಸ್! ಕೇವಲ ಇದೇ ಮಾತನ್ನು ತಿಳಿಯುವದಕ್ಕಾಗಿ ನೀನು ನನ್ನ ಒಳಿಗೆ ಬರುವ ಕಷ್ಟವಹಿಸಿರುವೆ ಎಂದಾದರೆ ನಿನ್ನಲ್ಲಿ ಧೈರ್ಯವು ಕಡಮೆಯಿಲ್ಲವೆಂಬುದನ್ನು ಪ್ರಪಂಚಕ್ಕೆ ನಾನು ಸಾರಬೇಕಾಗುವುದು. ನಿನ್ನ ಮಾತಿಗೆ ನನ್ನ ಬಳಿಯಲ್ಲಿರುವ ಉತ್ತರವೇನೆಂದರೆ, ಈಗ ನಾನು ಇದೇ ಸ್ಥಳಕ್ಕೆ ಕಾರ್ಡೋನನನ್ನು ಕರೆದು ಆತನಿಗೆ ನಿನ್ನ ಈ ಮಾತನ್ನು ತಿಳಿಸಿಬಿಡಲಿಚ್ಛಿಸುತ್ತೇನೆ.

ಬ್ಲೇಕ್— ಜೆನ್ನಾಯಿತು! ನಿನ್ನ ಇಚ್ಛೆಯು ಹಾಗಿದ್ದರೆ ನಾನೂ ನಿನ್ನ ಈ ಕೆಲಸಕ್ಕೆ ವಿಘ್ನವನ್ನೊಟ್ಟುಮಾಡುವುದಿಲ್ಲ. ಯಾವುದಕ್ಕಾಗಿ ನೀನು ಜಿನೋವಾಕ್ಕೆ ಒರುವ ಕಷ್ಟವನ್ನು ವಹಿಸಿರುವೆಯೋ, ಅದರ ಕಾರಣವನ್ನೂ ನಾನು ಏನ್ಸಿಗೆ ತಿಳಿಸಲಪೇಕ್ಷಿಸುತ್ತೇನೆ.

ಬ್ಲೇಕನ ಈ ಮಾತನ್ನು ದೃಢನಿಶ್ಚಯ ಸ್ವರದಿಂದ ಹೇಳಿದನಲ್ಲದೆ, ಹಾಗೆ ಹೇಳುವಾಗ ಮಜಿಯ ಮುಖವನ್ನು ತೀಕ್ಷ್ಣ ದೃಷ್ಟಿಯಿಂದ ನೋಡುತ್ತಿದ್ದನು. ಕ್ಷಣಮಾತ್ರದಲ್ಲಿ ಆತನ ಮುಖವು ಬೆಳುಪೇರಿದುದನ್ನು ಬ್ಲೇಕನು ಕಂಡನು. ಆದರೆ ಕೂಡಲೇ ಮಜಿಯ ಮುಖವು ಕೆಂಪೇರಿತು. ಆತನ ಸಂಪೂರ್ಣ ದೇಹವೂ ಕೋಪದಿಂದ ಕಿಡಿಕಿಡಿಯಾಯಿತು. ಥಟ್ಟನೆ ಪಿಸ್ತೂಲನ್ನು ತೆಗೆದು ಅದರ ನಳಿಗೆಯ ಬಾಯಿಯನ್ನು ಮಿ॥ ಬ್ಲೇಕನ ಹಣೆಗೆ ಹಿಡಿದನು.

ತನ್ನ ಜೀವನದಲ್ಲಿ ಮಿ॥ ಬ್ಲೇಕನು ಎಷ್ಟೋ ದೊಡ್ಡದೊಡ್ಡ ಅಪಾಯುಗಳನ್ನು ಎದುರಿಸಿ ಅನುಭವಿಸಿದ್ದನು. ಆದರೆ ಸಾವು ಇಷ್ಟು ಹತ್ತಿರಕ್ಕೆ ಬಂದುದನ್ನು ಈ ಮುಂಚೆ ಅವನು ಎಂದೂ ಕಂಡಿರಲಿಲ್ಲ. ಇಷ್ಟಾದರೂ ಕಳವಳದ ಚಿಹ್ನೆಯಾವುದೂ ಆತನ ಮುಖದಲ್ಲಿ ಪ್ರಕಟವಾಗಲಿಲ್ಲ. ಅಲ್ಲದೆ ತನ್ನ ಕೈಲಿದ್ದ ಸಿಗರೇಟನ್ನು ಬಾಯಲ್ಲಿಟ್ಟು, ಅದರ ಹೊಗೆಯನ್ನು ಮಜಿಯ ಮುಖದ ಕಡೆಗೆ ಹಾರಿಸಿದಾಗ ಅವನ ಕೈ ಕೂಡ ನಡಗಲಿಲ್ಲ. [ಮುಂದುವರಿಯುವುದು

ನ ತ್ಯ ವಾ ದಿ

ನ್ಯಾಯವಿಧಾಯಕ ಸಭೆ

ಅಧಿವೇಶನದ ತಾರೀಖಿನ ದಿನದ ಪ್ರಶ್ನೋತ್ತರಗಳಾದ ನಂತರ ನ್ಯಾಯಾಂಗ ಸಚಿವರಾದ ರಾ ಜಸೇವಾ ಪ್ರಸಕ್ತ ರಾಮಮನಾಥ್ ರನರು ಮೈಸೂರು ಲೇಬರ್ ಮಸೂದೆಯನ್ನು ಸೆಲೆಕ್ಟ್ ಕಮಿಟಿಯಲ್ಲಿ ತಿದ್ದುಪಡಿಯಾಗಿರುವಂತೆ ಸಭೆಯ ಮುಂದಿಟ್ಟರು. ತದನಂತರ ಮಸೂದೆಯ ಒಂದೊಂದು ಕ್ಲಾಸನ್ನು ವತ್ತು ಅದಕ್ಕೆ ಬರಿದಿರತಕ್ಕ ತಿದ್ದುಪಡಿಗಳನ್ನು ತೆಗೆದುಕೊಂಡು ಚರ್ಚೆ ಸಲಾಯಿತು. ಶ್ರೀ ನಾರಾಯಣರಾಯರು ಕೂಲಿಗಾರರ ಸಂಘಗಳನ್ನೆಲ್ಲಾ ಸೇರಿಸಿ "ಫೆಡರೇಷನ್" ಸಂಸ್ಥೆಯೊಂದನ್ನು ಸ್ಥಾಪಿಸುವ ಹಕ್ಕಿನ ವರ್ಯಾದೆಗೆ ಅವಕಾಶವಿರಬೇಕೆಂದು ತಿಳಿಸಿದರು. ಇದು ಚರ್ಚೆಗೆ ಬಂದಾಗ ಒಟ್ಟಿಗೆ ಹಾಕಲಾಗಿ ವಿರೋಧವಾಗಿ ಹೆಚ್ಚು ಓಟುಗಳು ಒಂದು ತಿದ್ದು ಬದ್ದಾಹೋಯಿತು.

ಶ್ರೀ ಟಿ. ರಾಮಚಂದ್ರಂರಾಯರು ತಂದ ಫೆಡರೇಷನ್ ಒಗ್ಗೆ ತಿದ್ದುಪಡಿ ಬದ್ದುಹೋಯಿತು. "ಇಂಡಿಪೆಂಡೆಂಟ್ ಡಿಸ್ಟ್ರಿಬ್ಯೂಟ್" ಎಂಬುದರ ಆರ್ಥಿಕ ವಿವರಣೆ ಬಗ್ಗೆ ಮಾ|| ನಾರಾಯಣರಾಯರುಕೊಟ್ಟ ಸಲಹೆ ಒಪ್ಪಲಾಯಿತು.

[ನ್ಯಾಯವಿಧಾಯಕ ಸಭೆಯ ಕಾರ್ಯಕಲಾಪಗಳ ವರದಿಯನ್ನು ಪುರವಣಿ ಪುಟಗಳಲ್ಲಿ ಪ್ರಕಟಿಸಬೇಕೆಂದಿದ್ದೆವು. ಆದರೆ ಕೆಲವು ಅನಿವಾರ್ಯದಿಂದ ಸಾಧ್ಯವಾಗಲಿಲ್ಲ. ಮುಂದಿನ ವಾರದಲ್ಲಿ ನ್ಯಾಯವಿಧಾಯಕ ಸಭೆಯಲ್ಲಿ ನಡೆದ ಮುಖ್ಯ ವಿಷಯಗಳನ್ನು ಪ್ರಕಟಿಸುತ್ತೇವೆ.]

ಯು ದ್ಧ

ರಷ್ಯಾ ಯುದ್ಧದಲ್ಲಿ ಹೆಚ್ಚು ಕಡಮೆ ಎಲ್ಲಾ ಕಡೆಯಲ್ಲಿ ರಷ್ಯನರ ಕೈ ಮೇಲಾಗಿದೆ. ಜರ್ಮನರನ್ನು ಹಿಂದಟ್ಟಿ ಕಳೆದುಕೊಂಡ ಪಟ್ಟಣಗಳನ್ನೆಲ್ಲ ವಶಪಡಿಸಿಕೊಳ್ಳುತ್ತಿದ್ದಾರೆ ರಷ್ಯಾದಲ್ಲುಂಟಾದ ಅಪಜಯದ ಫಲವಾಗಿ, ಹಿಟ್ಲರ್ ಜರ್ಮನ್ ಸೈನ್ಯಾಧಿಕಾರವನ್ನು ಈಗ ತೆಗೆದುಕೊಂಡಿದ್ದಾನೆ.

ಫಿಲಿಪ್ಪೈನಿಸಲ್ಲಿ ಜಪಾನಿಯರಿಗೂ ಅಮೇರಿಕನರಿಗೂ ಯುದ್ಧ ಜೋರಾಗಿದೆ. ಹೆಚ್ಚುಚ್ಚು ಮುಂದಿ ಜಪಾನಿಯರ ಬಂದಿಳಿಯುತ್ತಿದ್ದಾರೆ. ಆದರೆ ಅಮೇರಿಕನರು ಅನೇಕ ಕಡೆಗಳಲ್ಲಿ ಜಪಾನಿಯರನ್ನು ಹಿಂದಕ್ಕಟ್ಟುತ್ತಿದ್ದಾರೆ.

ಹಾಂಕಾಂಗಿನಲ್ಲಿ ಕದನ ಜೋರಾಗಿದ್ದರೂ ಬ್ರಿಟಿಷರು ಜಪಾನಿಯರನ್ನು ಹಿಂದಕ್ಕಟ್ಟುತ್ತಿದ್ದಾರೆ.

ಅಕ್ಕಿಯನ್ನು ಹತೋಟಿಯಲ್ಲಿಡುವ ಏರ್ಪಾಡು

ಮೈಸೂರಿನಲ್ಲಿ ಹಳೇ ಅಕ್ಕಿಯನ್ನು (ಕೊಯಂಬತ್ತೂರು ಸಣ್ಣ) ಪಲ್ಲಾ ಒಂದಕ್ಕೆ 18 ರೂಪಾಯಿಗಳಂತೆ ಬಿಕರಿ ಮಾಡಬೇಕೆಂದು ಸರ್ಕಾರದವರು ಏರ್ಪಾಡು ಮಾಡಿರುವರು. ಕೊಯಂಬತ್ತೂರು ಸಣ್ಣ ಅಕ್ಕಿಯಲ್ಲಿಯೇ ಹೆಚ್ಚು ಪಾಲಿಷ್ ಆದ ಅಕ್ಕಿ, ಭತ್ತದ ಕಾಳುಳ್ಳ ಅಕ್ಕಿ, ನುಚ್ಚು ಹೆಚ್ಚಾಗಿರುವ ಅಕ್ಕಿ ಈ ರೀತಿಯಲ್ಲಿ ಅನೇಕ ಬಗೆಗಳಿರುತ್ತವೆ. ನುಚ್ಚು, ಭತ್ತದಕಾಳು ಇಲ್ಲದ ಅಕ್ಕಿಯನ್ನು 18 ರೂಪಾಯಿಗಳಂತೆ ಕೊಡಲು ಇಚ್ಛೆಯಿಲ್ಲದಿದ್ದಲ್ಲಿ ತಮ್ಮಲ್ಲಿ ಇರುವ ಅಕ್ಕಿಯೇ ಅಂತಾದ್ದೆಂದೂ ಅವಶ್ಯಕವಿದ್ದಲ್ಲಿ ಅದನ್ನೇ ಕೊಳ್ಳಬಹುದೆಂದೂ ವ್ಯಾಪಾರಸ್ಥರು ಹೇಳಬಹುದು. ಜನಗಳಿಗೆ ಈ ತೊಂದರೆಯನ್ನು ತಪ್ಪಿಸಲು ಕೀ|| ಶೇ|| ಸರ್ ಕೆ. ಶೇಷಾದ್ರಿ ಅಯ್ಯರ್‌ರವರ ಕಾಲದಲ್ಲಿ ಏರ್ಪಡಿಸಿದ್ದಂತೆ ಸರ್ಕಾರದವರೇ ಅಕ್ಕಿಯ ಕೋಠಿಗಳನ್ನಿಡಿಸುವದುಚಿತವಾಗಿರುತ್ತದೆ.

ಆಯುರ್ವೇದ ಸಮ್ಮೇಳನ

ಅಖಿಲಕರ್ನಾಟಕದ ೧೨ನೆಯ ಮತ್ತು ಮೈಸೂರು ಸಂಸ್ಥಾನದ ೧೦ನೆಯ ಆಯುರ್ವೇದ ಸಮ್ಮೇಳನಗಳು ಮತ್ತು ವಸ್ತುಪ್ರದರ್ಶನವು ಮೈಸೂರು ರಾಜಧಾನಿಯಲ್ಲಿ ಇದೇ ಡಿಸೆಂಬರು 28, 29 ಮತ್ತು 30 ನೇ ತಾರೀಖುಗಳಲ್ಲಿ ಜರಗುವವು. ಮೈಸೂರು ಸರಕಾರದ ಆರೋಗ್ಯಶಾಖಾ ಮಂತ್ರಿವರ್ಯರಾದ ಶ್ರೀಯುತ ಹೆಚ್. ಬಿ. ಶಿಗುಂಡಪ್ಪಗೌಡ ಬಿ.ಎ.,ಬಿ.ಎಲ್., ರವರು ಸಮ್ಮೇಳನಗಳ ಪ್ರಾರಂಭೋತ್ಸವವನ್ನು ಟವನ್ ಹಾಲಿನಲ್ಲಿ ತಾರೀಖು 28 ನೆಯ ಪ್ರಾತಃಕಾಲ 8 ಘಂಟೆಗೆ ದಯೆಯಿಟ್ಟು ನೆರವೇರಿಸುವರು.

ನೆಪೋಲಿಯನ್ನನ ಪರಿಮಳ ಸ್ನಾನ

ನೆಪೋಲಿಯನ್ ಬೋನಪಾರ್ಟನು ವಿಚಿತ್ರವಾದ ಅಭ್ಯಾಸಗಳುಳ್ಳ ಮಹಾಪುರುಷನು. 25 ಬಟ್ಟಲು ಕಾಫಿ ಒಂದು ದಿನಕ್ಕೆ ಕುಡಿಯುತ್ತಿದ್ದನು ಒಂದು ತಿಂಗಳಿಗೆ ಏಳು ಪೌಂಡುಗಳ ನಶ್ಯವನ್ನು ಸೇದುತ್ತಿದ್ದನು. ಯು ಡಿ ಕಲೋನ್ ಎಂಬ ಅತ್ಯಮೂಲ್ಯವಾದ ಪರಿಮಳದ ಸೀಸೆಗಳನ್ನು ತಲೆಯ ಮೇಲೂ ಭುಜಗಳ ಮೇಲೂ ಸುರಿದುಕೊಳ್ಳುತ್ತಿದ್ದನು. ಅಷ್ಟೊಂದು ಬಲವಾದ ವಾಸನೆಯನ್ನೂ ತಾಳುವ ಸಾಮರ್ಥ್ಯವುಳ್ಳವನವನು ಒಂದು ತಿಂಗಳಿಗೆ ಅರವತ್ತರನರಿಗಿಂತ ದೊಡ್ಡ ಸೀಸೆಗಳಲ್ಲಿ ತುಂಬಿದ ಇಂತಹ ಬಹು ಬೆಲೆಯುಳ್ಳ ಬಲವಾದ ವಾಸನೆಯ ತೈಲಗಳನ್ನು ಉಪಯೋಗಿಸುತ್ತಿದ್ದನಂತೆ.

(ಸಾಧ್ವಿ)

Sri
Mahalakshmi Hall
Tailors
Outfitters
&
Breeches Specialists
Sayyaji Rao Road, Mysore

ಅರ ಸಾಮಾಜಿಕ
— ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. 7 ಆಣೆ ಸ್ಟಾಂಪು ಕಳುಹಿಸಿದರೆ ಪುಸ್ತಕವನ್ನು ಕಳುಹಿಸುತ್ತೇವೆ.
ಸತ್ಯವಾದಿ ಆಫೀಸ್. ಮೈಸೂರು

Discerning Comeptitors
alway consult
The Oracle
Weekly (Regd)
for expert comments and exhaustive
Forum, on I. W. C.
— Published Every Wednesday —
Subscription Rates
Annual Rs 4, Half-yearly Rs 2
Quarterly Re 1
Prtce per copy 2 annas
THE ORACLE
68 Commercial Street, Bangalore

ಉಪಯುಕ್ತವಾದ ವರ್ತಮಾನ
ಮನೆ, ಗದ್ದೆ, ವಗೈರೆ ಮಾರತಕ್ಕವರೂ, ಕೊಳ್ಳತಕ್ಕವರೂ, ಭೋಗ್ಯ, ಆಧಾರ ಮಾಡತಕ್ಕವರೂ, ಭೋಗ್ಯ ಆಧಾರಕ್ಕೆ ಪಡೆಯತಕ್ಕವರೂ, ಮತ್ತು ಮನೆಗಳನ್ನು ಬಾಡಿಗೆಗೆ ಕೊಡತಕ್ಕವರೂ, ಬಾಡಿಗೆಗೆ ತೆಗೆದುಕೊಳ್ಳುವವರೂ, ಸಾಲ ಕೊಡತಕ್ಕವರೂ, ಸಾಲ ತೆಗೆದುಕೊಳ್ಳುವವರೂ. ನಮ್ಮ ಏಜೆನ್ಸಿಗೆ ತಿಳಿಸಿದಲ್ಲಿ ಸೂಕ್ತವಾದ ಏರ್ಪಾಡು ಮಾಡಲಾಗುವದು
ಮ್ಯಾನೇಜರ್. ಸತ್ಯವಾದಿ ಆಫೀಸ್
ಚಾಮರಾಜಪುರಂ. ಮೈಸೂರು.

The Satyavadi Limited
(Incorporated in Mysore State)
MYSORE.
A few shares of Rs. 5 are available

ಯುದ್ಧವು ಹಿಂದೂಸ್ಥಾನದ ಬಾಗಿಲಿಗೆ ಬಂತು !

ಡಿಸೆಂಬರ ೭ ನೆಯ ತಾರೀಖಿನ ದಿನ ಜಪಾನು ಅಮೇರಿಕಾ ಬ್ರಿಟನ್ ವಿರುದ್ಧ ಯುದ್ಧ ಸಾರಿತು. ಥಾಯಿಲ್ಯಾಂಡ್, ಮಲೆಯ, ಸಿಂಗಪೂರ, ಹವಾಯ, ಫಿಲಿಪೈನುಗಳನ್ನು ಭಯಂಕರ ರಣಭೂಮಿಯನ್ನಾಗಿ ಮಾಡಿತು. ಬ್ರಿಟನ್ ಅಮೇರಿಕ ಗಳ ಎಷ್ಟೋ ಹಡಗುಗಳನ್ನು ಮೊದಲನೆಯ ಹೊಡತಕ್ಕೇ ಮುಳುಗಿಸಿತು. ಅಪಾರ ಪ್ರಾಣಹಾನಿಗೀಡುಮಾಡಿತು.

ಜಪಾನು ಅಮೇರಿಕಾಗಳ ಸಂಧಾನದ ಮಾತುಕತೆಗಳ ನಡೆದಾಗಲೆ ಸಂಧಾನದ ಪ್ರಯತ್ನ ವಿಫಲಹೊಂದಿ ಜಪಾನು ತನ್ನ ಆಕ್ರಮಣದ ಧೋರಣೆಯನ್ನ ಹಾಗೆಯೇ ಮುಂದೆ ಸಾಗಿಸುವದೆಂದು ಇಡಿ ಜಗತ್ತಿಗೆ ಮನವರಿಕೆಯಾಗಿ ಹೋಗಿದ್ದಿತು. ಆದರೂ ಆ ಮಾತುಕತೆಗಳು ಹನುಮನ ಬಾಲದಂತೆ ಒಂದೇ ಸವನೆ ಉದ್ದ ಬೆಳೆಯುತ್ತಲೇ ಹೋದವು. ಹೀಗಿದ್ದರೂ ಕೂಡ ಅವರೊಳಗಿಂದ ಅಪಯಶಸ್ಸಿನ ಹೊಂತಾಗಿ ಮತ್ತೇನೂ ಹೊರಬೀಳಲಾರದೆಂದು ನಾವು ಹೋದ ಸಲದ ಬುದ್ಧ ಸಮಾಲೋಚನೆಯಲ್ಲಿ ಹೇಳಿಯೇ ಇದ್ದೆವು. ಮತ್ತು ಇಂದು ಅಂದಿನ ಆ ನಮ್ಮ ತರ್ಕ ಪ್ರತ್ಯಕ್ಷ ಘಟನೆಯಾಗಿ ಬಿಟ್ಟಿದೆ. ಯುದ್ಧ ಘೋಷಣೆ ಮಾಡುವದರ ಪೂರ್ವದಲ್ಲಿಯೇ ಜಪಾನ, ಬ್ರಿಟನ್ ಅಮೆರಿಕದ ಪ್ರದೇಶಗಳ ಮೇಲೆ ಮತ್ತು ಹಡಗುಗಳ ಮೇಲೆ ಭಯಂಕರ ಧಾಳಿ ಮಾಡಿ ಅವರನ್ನು ಅಪಾರ ನಷ್ಟಕ್ಕೀಡುಮಾಡಿದೆ ಸಿಂಗಾಪೂರ್, ಹವಾಯಿಮನಿಲಾಗಳ ಮೇಲೆ ಭೀಕರ ವೈಮಾನಿಕ ಧಾಳಿಯಿಂದ ಅಸಂಖ್ಯ ಪ್ರಾಣಹಾನಿಯನ್ನುಂಟುಮಾಡಿದುದಲ್ಲದೆ ಬ್ರಿಟನ್ ಅಮೆರಿಕೆಗಳ ಎಷ್ಟೋ ದೊಡ್ಡ ಹಡಗುಗಳ ತಳಕಾಣಿಸಿದೆ. ಫಿಲಿಪಾಯಿನ, ಮಲಯಾ ಪ್ರತ್ಯೇಕ ಆಯಲಂಡಗಳಲ್ಲಿ ಕೊಡೆ ನೈನೂಸಿರನ್ನು ಇಳಿಸಿ ಆಕ್ರಮಣ ಮಾಡತ್ತಿದೆ. ಪ್ರತ್ಯೇಕ ಆಯಲಾಂಡವನ್ನು ಅದು ಈಗಾಗಲೇ ತನ್ನ ವಶಪಡಿಸಿಕೊಂಡು ಬಿಟ್ಟಿದೆ. ಫಿಲಿಪಾಯಿನ ಮಲಯಾಗಳಲ್ಲಿ ಉಭಯ ಪಕ್ಷದವರಲ್ಲಿ ಭಯಂಕರ ರಣಕಂದನ ನಡೆದಿದೆ. ಥಾಯಿಲಂಡದ ಮೇಲೆ ಆಕ್ರಮಣ ಮಾಡಲು ಅಲ್ಲಿಯ ಸರಕಾರವು ಜಪಾನಿ ಸರಕಾರಕ್ಕೆ ತಲೆಬಾಗಿ ತನ್ನ ಪ್ರದೇಶದೊಳಗಿಂದ ಜಪಾನಿ ಸೇನೆಗೆ ಮಾರ್ಗಕೊಡುವುದಕ್ಕೊಪ್ಪಿಕೊಂಡು ಒಪ್ಪಂದ ಮಾಡಿಕೊಂಡಿದೆಯೆಂದು ಇದೀಗ ಸುದ್ದಿ ಬಂದಿದೆ. ಬ್ರಿಟಿಷರ ಹಾಂಗಕಾಂಗ ಬಂದರನ್ನು ಜಪಾನಿಗಳು ಮುತ್ತಿ ಬಂದರದ ದಿಗ್ಬಂಧನೆ ಮಾಡಿದ್ದಾರಂತೆ. ಈ ಪ್ರಕಾರ ಜಪಾನಿಯರು ಮೊದಲನೆಯ ಹೊಡತಕ್ಕೆಯೇ ಯುದ್ಧದ ಆಗುಹೋಗುಗಳ ಮೇಲೆ ಪರಿಣಾಮವನ್ನುಂಟುಮಾಡಬಹುದಾದ ಯಶಸ್ಸನ್ನು ಸಂಪಾದಿಸಿದ್ದಾರೆ

ಕಳೆದ ೮ ನೆಯ ತಾರೀಖಿನ ದಿನ ಪಾರ್ಲಿಮೆಂಟು ಸಭೆಗೂಡಿತು. ಚರ್ಚಿಲರು ಜಪಾನಿನೊಡನೆ ಯುದ್ಧ ಘೋಷಣೆ ಮಾಡಿದ್ದಾರೆ. "ಪರಿಸ್ಥಿತಿ ಭಯಂಕರವಿದೆ. ನಮ್ಮ ಮೇಲೆ ಇನ್ನು ಅನೇಕ ಸಂಕಟಗಳು ಬರಬಹುದು. ನಾವು ಅವುಗಳನ್ನೆದುರಿಸಲು ಸಿದ್ಧರಿರಬೇಕು." ಎಂಬುದು ಅವರು ಪಾರ್ಲಿಮೆಂಟನಲ್ಲಿ ಮಾಡಿದ ಭಾಷಣದ ಸಾರವಾಗಿದ್ದಿತು. ಅಮೇರಿಕದ ಪ್ರದೇಶದ ಮೇಲೆ ಜಪಾನು ತಾನೇ ಮುಂದಾಗಿ ದಾಳಿ ಮಾಡಿರುವದರಿಂದ ಇನ್ನು ಯುದ್ಧದಲ್ಲಿ ಸೇರುವದು ಅನಿವಾರ್ಯವೆಂದು ಪ್ರೆಸಿಡೆಂಟ್ ರೂಜ್ವೆಲ್ಟರು ಹೇಳಿದ್ದಾರೆ. ಈ ಬಗೆಯಾಗಿ ಯುದ್ಧವು ಹಿಂದುಸ್ಥಾನದ ಬಾಗಿಲಿಗೆ ಬಂದಿತು ಅಸಾಮವು ಯುದ್ಧಪ್ರದೇಶವೆಂದು ಈಗಾಗಲೇ ಸಾರಲಾಗಿದೆ. ಆದರೂ ಕೂಡ ದೇಶದಲ್ಲಿ ಶತ್ರುಗಳನ್ನೆದುರಿಸುವ ಯಾವ ಉತ್ಸಾಹದ ಕಾರ್ಯಗಳೂ ನಡೆದಿಲ್ಲ. ಸರಕಾರವು ಸತ್ಯಾಗ್ರಹದ ಖೈದಿಗಳನ್ನು ಬಿಟ್ಟರೂ ಕೂಡ ಪರಿಸ್ಥಿತಿಯಲ್ಲಿ ಕೊಂಚವು ಒದಲಾವಣೆಯಾಗಿಲ್ಲ. ಪರಿಸ್ಥಿತಿಯಲ್ಲಿ ಒದಲಾವಣೆಗಳಾಗುವದಾದರೂ ಹೇಗೆ? ಯಾವ ಭಾಷಣ ಸ್ವಾತಂತ್ರ್ಯಕ್ಕಾಗಿ ಮಹಾತ್ಮಾಜಿಯವರು ರಾಷ್ಟ್ರಕ್ಕೆ ನೈಯುಕ್ತಿಕ ಸತ್ಯಾಗ್ರಹದ ದೀಕ್ಷೆಕೊಟ್ಟರೋ ಆ ಭಾಷಣ ಸ್ವಾತಂತ್ರ್ಯದ ಬೇಡಿಕೆಯನ್ನೊಪ್ಪದೆ ಬರಿಯ ಸತ್ಯಾಗ್ರಹಿಗಳನ್ನ ಬಿಟ್ಟರೆ ಸರಕಾರವೇನುಮಾಡಿದಂತಾಗುವುದು? ಮತ್ತು ಇದರಿಂದ ಪರಿಸ್ಥಿತಿಯಲ್ಲಿ ಸುಧಾರಣೆಯಾಗುವದೆಂದು ಅಪೇಕ್ಷಿಸುವದಾದರೆ ಮಾತ್ರ ಅದು ಪೂರ್ಣ ತಪ್ಪು. ರಾಷ್ಟ್ರವೀರ ಮಹಾತ್ಮಾಜಿಯವರನ್ನೆನು ಸರಿಸಲು ಸಿದ್ಧವೇ ಇದೆ. ಮಹಾತ್ಮಾಜೀಯವರೀಗ ಸತ್ಯಾಗ್ರಹವು ಹಾಗೆಯೇ ನಡೆಯಲೆಂಬ ನುಸ್ಸೀಷೆ ವ್ಯಕ್ತ ಮಾಡುವುದರಿಂದ ಅವರ ಇಚ್ಛೆಯು ಮೇರೆಗೇ ಕಾರ್ಯ ನಡೆದಿರುವದು.

ಆದುದರಿಂದ ಸರಕಾರದವರು ಇನ್ನಾದರೂ ಜಾಗ್ರತರಾಗಬೇಕು ಶತ್ರುಗಳು ಹಿಂದೂಸ್ಥಾನದ ಬಾಗಿಲಿಗೇ ಬಂದಿದ್ದಾರೆ. ಇನ್ನು ಅವರನ್ನು ಅದರಿಸಲೇಬೇಕು. ಬರಿಯ ಬ್ರಿಟಿಷ್ ಸಂಕಾರದ ಸೇನೆಯಿಂದ ಈ ಕಾರ್ಯವಾಗದು. ಅದಕ್ಕೆ ಇಂಡಿಯ ರಾಷ್ಟ್ರದ ಬೆಂಬಲಬೇಕು. ರಾಷ್ಟ್ರದ ಜನತೆಯ ನೆಂವು ನೀಡಿದ ಹೊಂತು ಶತ್ರುಗಳನ್ನು ಹಿಂದಕ್ಕಟ್ಟುವುದು ಕಠಿಣ. ಆದುದರಿಂದ ಸರಕಾರದವರು ಮೊದಲು ಜನತೆಯ ಬೆಂಬಲವನ್ನು ಹೇಗಾದರೂ ಮಾಡಿ ದೊರಕಿಸಲು ಬೇಕು. ಜನತೆ ಈಗ ಮಹಾತ್ಮಾಜಿಯವರ ಅಪ್ಪಣೆ ಪಾಲಿಸಲು ಸಿದ್ಧವಾಗಿ ನಿಂತಿದೆ. ಮಹಾತ್ಮಾಜಿಯವರ ಬೇಡಿಕೆಗಳನ್ನು ಪೂರೈಸಬೇಕು. ಸರಕಾರದವರು ರಾಷ್ಟ್ರದ ಜನತೆಯ ಬೆಂಬಲವನ್ನು ಪಡೆಯಬೇಕು. ಹಿಂದೂಸ್ಥಾನದ ಯುದ್ಧವೆಂದು ಮನಗಾಣಿಸಿಕೊಡಬೇಕು. ಅದರ ಹೊರತು ಇನ್ನು ಬೇರೆ ಮಾರ್ಗವಿಲ್ಲ. (ಸಂದೇಶ)

ಕಲ್ಕಿ ಅವತಾರ

1 ಆಗಾಖಾನಿ ಸಂಥದವರು ಸರ್ ಆಗಾಖಾರವರು ಕಲ್ಕಿ ಅವತಾರವೆಂದೂ, ಅವರು ನಿಷ್ಕಳಂಕರೆಂದೂ ಭಾವಿಸುವರು.

2 ಮೌಲಾನಾ ಮೊಹಮದ್ ಸಿದ್ದೀಕ್ ದರ್ಗಾದಾರ್‌ರವರು ತಾವು ಕೆಲ್ಕಿ ಅವತಾರವೆಂದು ಪ್ರಸಿದ್ಧಿಪಡಿಸಿರುವರು.

3 ಪಂಡಿತ ರಾಜ ನಾರಾಯಣ ಶಾಸ್ತ್ರಿಯವರು ಕಲ್ಕಿ ಅವತಾರವು ಆಗಲೇ ಆಗಿರುವದೆಂದೂ, ಆ ಅವತಾರ ಪುರುಷನು ಜನ್ಮವೆತ್ತಿ ದೊಡನೆಯೇ ಪರಶುರಾಮರವರು ಆ ಬಾಲಕನನ್ನು ಮಹೇಂದ್ರ ಪರ್ವತಕ್ಕೆ ಕರೆದುಕೊಂಡು ಹೋಗಿರುವರೆಂದೂ, ಆತನು ಶೀಘ್ರದಲ್ಲಿಯೇ ಬಂಗಾಳಾದಲ್ಲಿ ಪ್ರಕಟವಾಗಿ, ದುಷ್ಟಶಿಕ್ಷಣ ಶಿಷ್ಟಪರಿಪಾಲನೆಯನ್ನು ಮಾಡುವನೆಂದೂ ಹೇಳಿರುವರು.

4 ಶುದ್ಧಧರ್ಮಸಮಾಜದವರು ಕೂಡ ಮೈತ್ರೇಯ ಋಷಿಗಳು ಮೊನಾದ ಸಮಾಪದಲ್ಲಿಲ್ಲಿಯೇ ಜನ್ಮಧಾರಣೆ ಮಾಡಿರುವರೆಂದೂ, ಮುಂದಿನ ವರ್ಷ ಅವರು ಪ್ರಕಟವಾಗಿ ಧರ್ಮ ಸಂಸ್ಥಾಪನೆ ಮಾಡುವರೆಂದೂ ಹೇಳಿರುವರು.

"ಚೇತಾವನಿ" ನಾಮಕ ಗ್ರಂಥದ ಪ್ರಕಾರ 1943 ರಲ್ಲಿ ಕೃತಯುಗವು ಆರಂಭವಾಗಬೇಕು. ಅಂದರೆ ಕಲಿ ಕಲ್ಮಷವು ನಾಶವಾಗುವ ಕಾಲವು ಸಮಾಪಿಸಿದಂತಾಯಿತೆಂದು ತಿಳಿಯಬಹುದು.

6 ಅಹಮದಾಬಾದಿನ ಶ್ರೀ ಹರೇರಾಮಶರ್ಮರವರು ಏನು ಹೇಳಿರುವರೆಂದರೆ— ಚೀನಾದ ಉತ್ತರದಲ್ಲಿ ಸಂಬಳ ಗ್ರಾಮವಿದೆ. ಅಲ್ಲಿ ಕಲ್ಕಿಯು ಜನ್ಮವೆನ್ನು ತಾಳುವನು, ಶೀಘ್ರದಲ್ಲಿಯೇ ಪ್ರಕಟವಾಗುವನು."

ಆದುದರಿಂದ ಭಗವಾನನ ಆಗಮನವನ್ನು ಪ್ರತಿ ನಿಮಿಷದಲ್ಲಿಯೂ ಎದುರುನೋಡುತ್ತಾ ಆತನನ್ನು ಅನುಸರಿಸಿ ನಡೆಯಲು ಪ್ರತಿ ಕ್ಷಣದಲ್ಲಿಯೂ ಅಧ್ಯಾತ್ಮಶಕ್ತಿಯು ಹೆಚ್ಚಲು ಆತನ ಚಿಂತೆಯಲ್ಲಿ ತತ್ಪರರಾಗಿರುವಿಕೆಯು ಉಚಿತವಾಗಿರುತ್ತದೆ. (ಓಂ)

The Indian Marriage Gazette

The only illustrated monthly journal of its kind in India containing very interesting and instructive articles on matrimonial topics.

Every home should have a copy of this unique journal as it will help to solve the problem of marriage both now and in future.

Annual subscription Rs. 3

Single copy As. 5 in stamps.

Wanted Agents in every town.

Apply to— The Manager

The Indian Marriage Gazette

Post Box No. 227, Madras

ಈ ವಾರದ ಭವಿಷ್ಯ

ಮೇಷ

ನಿಮಗೆ ಹೆಚ್ಚು ಹಣಕಾಸಿನ ಅವಶ್ಯಕತೆ ಬೀಳುವುದು. ಹೊಸದಾಗಿ ಸಾಲಕ್ಕೆ ಕೈಹಾಕ ಬೇಕಾದೀತ. ಜನರಲ್ಲಿ ಸರಳಭಾವದಿಂದ ವರ್ತಿಸಿ, ಕೆಲಸ ಕಾರ್ಯಗಳಲ್ಲಿ ಭಂಗವುಂಟು.

ವೃಷಭ

ಚಿಂತೆಯುಲ್ಲಿ ವಳುಗಿರುವಿರಿ. ಆದರೆ ಏನೊಂದು ಉಪಯುಕ್ತಸ್ಸು ಒದಗುವುದಿಲ್ಲ. ಧನಾಗವನ ಕಡಮೆ, ಖರ್ಚು ಹೆಚ್ಚು.

ಮಿಥುನ

ಒಳ್ಳೇ ಅನುಕೂಲ ಕಾಲ. ಗಾಳಿ ಬಂದಾಗ ತೂರಿಕೋ ಎಂಬಂತೆ ಈಗಲೇ ಎಲ್ಲ ಕೆಲಸ ಕಾರ್ಯಗಳಲ್ಲಿ ಕೈಹಾಕಿ ಯಶಸ್ವಿಯಾಗಿ ಮುಗಿಸಿಕೊಳ್ಳಿ.. ಹೊಸ ಕಾರ್ಯಗಳಲ್ಲಿ ಲಾಭವಿದೆ.

ಕರ್ಕಾಟಕ

ಅನುಕೂಲಗಳು ಒದಗುವವು. ನಂಟರಿಷ್ಟರಿಂದ ಸಹಾಯ. ಧನಾಗಮನ, ಯತ್ನ ಕಾರ್ಯಸಿದ್ಧಿ.

ಸಿಂಹ

ಋಣಬಾಧೆ ಹೆಚ್ಚಾಗಿದೆ. ಉತ್ಪತ್ತಿ ಕಡಮೆಯಾಗಿದೆ. ಬಂಧುಮಿತ್ರರ ಸಹಾಯ ಸಹಾನುಭೂತಿಯಿದೆ.

ಕನ್ಯಾ

ತೊಂದರೆ ಕಾಲ. ಹಣಕಾಸು ಸ್ವಲ್ಪ ಸಿಕ್ಕಿದರೂ ಮಾನ ಮರ್ಯಾದೆಗೆ ಕುಂದಕವಿದೆ. ಉದ್ಯೋಗ ವ್ಯಾಪಾರದಲ್ಲಿ ತಕ್ಕಮಟ್ಟಿಗೆ ಜಯವಿದೆ.

ತುಲಾ

ಮಧ್ಯಮ ಫಲ. ಅನಾನ ಕೂಲಗಳು ಸ್ವಲ್ಪ ಕಡಮೆಯಾಗಿದೆ. ಕೆಲಸ ಕಾರ್ಯಗಳಲ್ಲಿ ನಿಮ್ಮ ಯತ್ನವನ್ನು ಸಾಗಿಸಿರಿ. ಜನರಲ್ಲಿ ನಿಷ್ಠೂರಕ್ಕೆ ಹೋಗದಿರಿ

ವೃಶ್ಚಿಕ

ಕೆಲಸಕಾರ್ಯಗಳಲ್ಲಿ ಜಯವಿದೆ. ಧನಾಗಮನ ಚೆನ್ನಾಗಿದೆ ಸ್ವಪರ ಜನರ ಸಹಾಯ ಸಹಾನುಭೂತಿಯಿದೆ.

ಧನು

ನಿಮ್ಮ ಬಯಕೆಯೆಲ್ಲವೂ ಕೈಗೂಡಲಾರವು. ಉತ್ಪತ್ತಿಗಿಂತ ಖರ್ಚು ಹೆಚ್ಚು. ಸಂಸಾರದಲ್ಲಿ ಚಿಕ್ಕಪುಟ್ಟ ಕತ್ತಗಳು.

ಮಕರ

ಶರೀರಾರೋಗ ವಿಚಾರದಲ್ಲಿ ಜಾಗರೂಕರಾಗಿರಿ. ಖರ್ಚು ಆದರಿಸಿದ್ದರೂ ತಕ್ಕಷ್ಟು ಉತ್ಪತ್ತಿಯಿದೆ. ಸಧ್ಯ ಶಾಂತತೆಯಿಂದ ಕಾಲ ತಳ್ಳಿರಿ

ಕುಂಭ

ನಿಮ್ಮ ಗ್ರಹಗತಿಗಳು ಚೆನ್ನಾಗಿವೆ. ನಿಮ್ಮ ಸ್ಥಿತಿಗತಿಗಳು ಉತ್ತಮಗೊಳ್ಳುವವು. ಯತ್ನ ಕಾರ್ಯಗಳು ಸಿದ್ಧಿಸುವವು. ಜನರಲ್ಲಿ ಮಾನಮರ್ಯಾದೆ ಲಭಿಸುವುದು.

ಸುಲಭ ಚಿಕಿತ್ಸೆ

ಉಬ್ಬಸ ವ್ಯಾಧಿಗೆ— ಮೆಣಸು. ರಾಸ್ನೆ, ಅಳಲೆಕಾಯಿ, ಇವುಗಳನ್ನು ಕುಟ್ಟಿ ಶೋಧಿಸಿ, ಕೆಂಪು ಕಲ್ಸಕ್ಕರೆ ಪಾಕವನ್ನು ಮಾಡಿ ಅದರಲ್ಲಿ ಈ ಪುಡಿಯನ್ನು ಬೆರಿಸಿ, ಜೇನುತುಪ್ಪ, ತುಪ್ಪ ಗಳನ್ನು ಹಾಕಿ ಗುಳಿಗೆಗಳಾಗಿ ಮಾಡಿ, ಆ ಗುಳಿಗೆಗಳನ್ನು ದವಡೆಯಲ್ಲಿಟ್ಟುಕೊಂಡು ನೀರನ್ನು ನುಂಗುತ್ತಿರತಕ್ಕದ್ದ.

ಕೆಮ್ಮಿಗೆ— ನಿಂಬೇಹಣ್ಣಿನ ರಸದಲ್ಲಿ ಹವಳವನ್ನು ನೆನೆಹಾಕಿ ಅರೆದು ಪುಟಹಾಕಿ ಭಸ್ಮವನ್ನು ಜಲದೊಂದಿಗೆ ಗುಲಗಂಜೀ ತೂಕದಷ್ಟು ಸೇವಿಸುವುದು.

ವಾಂತಿಯಾಗುವುದು ನಿಲ್ಲಲು— ಒಣಗಿದ ನಿಂಬೇಕಾಯಿ. ಏಲಕ್ಕಿ, ನವಲುಗರಿ, ಇವನ್ನು ಸುಟ್ಟು ಭಸ್ಮಮಾಡಿ, ಜೇನುತುಪ್ಪದಲ್ಲಿ ಕಲಿಸಿ ನೆಕ್ಕುವುದು.

ಬೇಧಿಯಾಗಬೆ ಕಾದಲ್ಲಿ— ಸೋನಾ ಮುಖಿ ಅಥವಾ ನೆಲಾವರಿಕೆಯನ್ನು ಚಟ್ನಿಯನ್ನಾಗಿ ಮಾಡಿಕೊಂಡು ಅನ್ನದೊಂದಿಗೆ ಕಲಿಸಿ ಕೊಂಡು ತಿನ್ನುವುದು.

ಜಠರಾಗ್ನಿ ದೀಪ್ತಿಯಾಗಲು— ಸಕ್ಕರೆಯ ಪಾಕದಲ್ಲಿ ಹಶೀಶುಂಠಿ ಮತ್ತು ಫೋಮಗಳನ್ನು ನೆನೆಹಾಕಿ ಸುಣ್ಣಿಗೆ ಅರೆದು ಸೈಂಧವ ಲವಣವನ್ನು ಸೇರಿಸಿದ ಮುದ್ದೆಯನ್ನು ಹಾಕಿ ಕಲಕಿ, ಆ ಪಾಕವನ್ನ ಹೊತ್ತಿಗೆ ಒಂದು ತೋಲಾದಂತೆ ಉಪಯೋಗಿಸುತ್ತಾ ಬರುವದು.

ಸ್ತ್ರೀಯರಿಗೆ ಹೆಗ್ಗಿಟ್ಟಿಗಿ ರಕ್ತವು ಹೋಗುತ್ತಿದ್ದಲ್ಲಿ—(1) ಕಲ್ಸಕ್ಕರೆ, ಏಲಕ್ಕಿ, ಹಾಲು, ಕಲ್ಲಾರುಗಳನ್ನು ಅರೆದು ಕುಡಿಯುವುದು.. (2) ಆಲದ ಹಾಲಿನೊಂದಿಗೆ ಆಕಳ ಹಾಲನ್ನು ಬೆರೆಸಿ ಕುಡಿಯುವದು. ಸಿಹಿಸಾರು ಅನ್ನ ಪಥ್ಯ.

ವೀರ್ಯವು ಪತನವಾಗದಿರಬೇಕಾಗಿದ್ದಲ್ಲಿ; ಒಲಿತ ಬಿಳೀದಾಸವಾಳ ಗಿಡದ ಬೇರಿನ ಗಂಧವನ್ನು ತೆಗೆದು ಅದರೊಂದಿಗೆ ಮೂರು ಬೆರಳಿಗೆ ಒರುವಷ್ಟು ಜೀರಿಗೆ, ಕಲ್ಲಾರು. ಕಲ್ಸಕ್ಕರೆಗಳ ಸಮಭಾಗ ಪುಡಿಯನ್ನು ಮಿಶ್ರಮಾಡಿ ಸೇವಿಸುವುದು. ಸಿಹಿಸಾರು ಅನ್ನ ಪಥ್ಯ.

ಉಷ್ಣದ ತಲೆನೋವಿಗೆ— ಕಾಹೂಕಾ ಬೀಜವನ್ನು ಅರೆದು ಹಚ್ಚುವುದು.

(ಓಂ)

ಮೀನ

ಶನಿಮಹಾರಾಯನ ವಕ್ರತ್ವದಿಂದ ಏಳು ರಾಟಕ್ಕೆ ಬಂದಿರುವುದು ನಿಜ. ಆದರೆ ಆತನಿಂದ ನಿಮಗೇನೂ ಅಂಥಾ ಕೆಡಕಾಗಲಿಕಾರದು. ಈ ಮನೆಯಲ್ಲಿ ಕೆಲವು ದಿನಗಳು ಮಾತ್ರ ಇರುವುದರಿಂದ ಆತನ ದೃಷ್ಟಿಯಲ್ಲಿ ತನ್ನ ಹೊಸ ಮನೆಯ ಕಡೆಯೇ ಇರುವುದು. ಅಲ್ಲದೆ ವಂಗಳನೂ ಸಧ್ಯದಲ್ಲೇ ನಿಮ್ಮ ಜನ್ಮರಾಶಿಯನ್ನು ಬಿಟ್ಟು ಮುಂದಿನ ಮನೆಗೆ ಹೋಗುವನು. ಆದರೂ ಚಿಲ್ಲರೆ ಕಷ್ಟನಷ್ಟಗಳು ನಿಮ್ಮನ್ನು ಅವರಿಸಿರುವುದು.

ಕಳೆದ ೧೦೦ ವರ್ಷಗಳಿಂದ

ಇಂಗ್ಲೆಂಡಿನ ಪ್ರಧಾನ ಮಂತ್ರಿಗಳು ಪಾರ್ಲಿಮೆಂಟು ಸಭೆಯನ್ನು ಅಲಂಕರಿಸಿದಾಗ ಅವರ ವಯಸ್ಸು ಎಷ್ಟು ಎಂಬುವದನ್ನು ಕೆಳಗೆ ಕೊಡಲಾಗಿದೆ.

ಹೆಸರು	ವರ್ಷ
ಸರ್ ರಾಬರ್ಟ್ ಪೀಲ್	೨೧
ಲಾರ್ಡ್ ಜಾರ್ಜ್ ರಸ್ಸೆಲ್	೨೧
ಲಾರ್ಡ್ ಡರ್ಬಿ	೨೧
ಲಾರ್ಡ್ ಅಬರ್ಡೀನ್	೨೧
ಲಾರ್ಡ್ ಪಾಮರ್ಸ್ಟನ್	೨೩
ಮಿ|| ಡಿಸರೇಲ್	೩೩
ಮಿ|| ಗ್ಲಾಡಸ್ಟನ್	೨೬
ಲಾರ್ಡ್ ಸಾಲಿಸಬರಿ	೨೩
ಲಾರ್ಡ್ ರೋಸ್ಬರಿ	೨೧
ಮಿ|| ಬಾಲ್ಫರ್	೨೬
ಸರ್ H. ಕ್ಯಾಂಪ್‌ಬೆಲ್ ಬಾನರ್‌ಮ್ಯಾನ್	೩೨
ಮಿ|| ಅಸ್ಕ್ವಿತ್	೩೪
ಮಿ|| ಲಾಯ್ಡ್ ಜಾರ್ಜ್	೨೭
ಮಿ|| ಬೊನಾರಾಲಾ	೪೨
ಮಿ|| ಬಾಲ್ಡ್ ವಿನ್	೪೧
ಮಿ|| ಚೇಂಬರ್‌ಲಿನ್	೪೯
ಮಿ|| ಚರ್ಚಿಲ್	೨೬

" ನನ್ನ ಕೈಲಿ ಅಧಿಕಾರವಿದ್ದಿದ್ದರೆ, ಭಾರತೀಯರು ಯುದ್ಧದಲ್ಲಿ ಪೂರ್ಣ ಸಹಕಾರವನ್ನು ನೀಡಬೇಕು, ಎಂಬ ಒಂದೇ ಒಂದು ನಿಯಮವನ್ನಿಟ್ಟು, ಅವರು ಕೇಳಿದುದೆಲ್ಲವನ್ನೂ ನಾನು ಕೊಡುತ್ತಿದ್ದೆ. "

—ಸರ್ ವಿಕ್ಟರ್ ಸೆಸೂನ್.

ಯುದ್ಧಕ್ಕೆ ಉಪಯೋಗಪಡುವ ಸಾಮಗ್ರಿಗಳು ಮತ್ತು ಅದರ ಬೆಲೆ

	ರೂ. ಆ. ಪೈ
ಸುರಳಿನ ಚೀಲ 1 ಕ್ಕೆ	0—2—0
ಪಿಸ್ತೂಲು 1 ಕ್ಕೆ	50—0—0
ರೈಫಲ್ 1 ಕ್ಕೆ	100—0—0
ಮೆಷಿನ್‌ಗನ್ 1 ಕ್ಕೆ	1800—0—0
ಬ್ಯಾರೇಜ್ ಬೆಲೂನ್ 1 ಕ್ಕೆ	10,000—0—0
ಲೈಟ್ ಆಂಟಿಏರ್‌ಕ್ರಾಫ್ಟ್‌ಗನ್	4,000—0—0
ಫೈಟರ್ ಏರ್‌ಕ್ರಾಫ್ಟ್	1,40,000—0—0
ಬಾಂಬರ್ ಏರ್‌ಕ್ರಾಫ್ಟ್	2,70,000—0—0
ಡಿಸ್ಟ್ರಾಯರ್	60 ಲಕ್ಷ
ಕ್ರ್ಯೂಸರ್ ಇದಕ್ಕೂ ಮೀರಿದ ಕೋಟಿ ರೂಪಾಯಿ	

ವಿವಿಧ ವಿಷಯಗಳು

ನಾಯಿಡುಪೇಟೆಗೆ 9 ಮೈಲು ದೂರದಲ್ಲಿಯ ಗೊಟ್ಟಪೋಲು ಗ್ರಾಮ ವಿಗ್ರಹಾರಂಕ್ಕೆ ಎರಡು ಪರ್ವಾಂಗುಗಳ ದೂರದಲ್ಲಿ ಕಳೆದ ಪಕ್ಷದಲ್ಲಿ ಸುರಿದ ಮಳೆಯಿಂದ ಭೂಮಿಯು ನೆನೆದು ಕರಗಿ 9 ಅಡಿ ಉದ್ದದ ವಿಷ್ಣು ವಿಗ್ರಹವು ಸ್ವಲ್ಪವಾಗಿ ಕಂಡುಬಂದಿತು. ಆ ಗ್ರಾಮಸ್ಥರು ಕಂಡು ಅಗೆದು ನೋಡಲು ವಿಷ್ಣು ವಿಗ್ರಹವು ಹೊರಬಿದ್ದಿತು. ಇನ್ನು ಮುಂದೆ ಇದನ್ನು ಒಂದು ದೇವಾಲಯದಲ್ಲಿ ಸ್ಥಾಪಿಸಲು ಏರ್ಪಾಡು ಆಗಬಹುದು.

ಆಲೋನಿಯಲ್ಲಿ ಬರನ್ನ ಒಂದಿರುವದರಿಂದ ಕ್ಷಾಮ ನಿವಾರಣೆ ಕಾರ್ಯಗಳನ್ನು ಆರಂಭ ಮಾಡಿರುವರು.

ಫ್ರೆಂಚು ಪಶ್ಚಿಮ ಆಫ್ರಿಕಾದ ಬಂದರಾದ ಡಾಕಾರ್ ಈಚೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿರುವದು. ಜರ್ಮನಿಯ ಕೋರಿಕೆಯಂತೆ ಆಫ್ರಿಕಾದಿಂದ ಡಾಕಾರಿಗೆ ರೈಲು ರಸ್ತೆಯನ್ನು ಹಾಕಲು ಮಾರ್ಷಲ್ ಪೀಟ್ಟನ್ ರವರು ಕಾರ್ಯ ನಡೆಸುತ್ತಿರುವರು. ಈ ರೈಲು ರಸ್ತೆಯು ಉದ್ದ 200 ಮೈಲಿಗಳು ಆಗುವದು. 19 ವರ್ಷಗಳ ಹಿಂದೆ ಈ ರಸ್ತೆಯ ನಿರ್ಮಾಣಕ್ಕೆ 20800000 ಪೌಂಡುಗಳು ಆಗುವೆಂದು ಅಂದಾಜು ಹಾಕಿದ್ದರು.

ಹಿಂದೂ ವಿಶ್ವವಿದ್ಯಾಲಯದ ಸಿಲ್ವರ್ ಜೂಬಿಲಿಯು ಒರುವ ಜನವರಿ 21 ನೇ ತಾರೀಖಿನಲ್ಲಿ ನಡೆಯುವದು. ಬಿಕನೀರ್ ಮಹಾರಾಜರವರು ಅಗಾಸನವನ್ನು ವಹಿಸುವರು. ಮಹಾತ್ಮಾ ಗಾಂಧಿಯವರು ಜೂಬಿಲಿ ಅಡ್ರೆಸ್ಸನ್ನು ಕೊಡಲಿರುವರು.

ಮಿ|| ಫಜಲುಲ್ ಹಕ್ಕರನ್ನು (ಬಂಗಾಳ ಪ್ರಧಾನ ಮಂತ್ರಿಗಳು) ಮುಸ್ಲಿಂ ಲೀಗಿನಿಂದ ತಳ್ಳಿ ಹಾಕಿರುವದಾಗಿ ಜಿನ್ನಾ ಸಾಹೇಬರ ಪಕ್ಷ ಕಟ್ಟಳೆ ಹೊರಡಿಸಿದ್ದಾರೆ.

ಕಲ್ಕತ್ತೆಯ ಮೇಲಾಗಬಹುದಾದ ಧಾಳಿಯಿಂದ ನಿರಾಶ್ರಿತರಾದವರಿಗೆ ಪರಿಹಾರ ಒದಗಿಸುವುದಕ್ಕೆ ಬಂಗಾಳ ಸರಕಾರದವರು ಕಲ್ಕತ್ತಾ ಕಾರ್ಪೊರೇಶನ್ನಿನೊಡನೆ ವಿಚಾರ ಮಾಡಿ ಒಂದು ಯೋಜನೆ ತಯಾರಿಸಿದ್ದಾರೆ.

ಪಂಜಾಬ್ ಗವರ್ನರವರು ಒಂದು ಹುಕುಮು ಹೊರಡಿಸಿ, ಜಿಲ್ಲಾ ಮ್ಯಾಜಿಸ್ಟ್ರೇಟರ್ರು ನಿರ್ಧರಿಸಿದ ಧಾರಣೆಗೆ ಸಾರ್ವಜನಿಕರಿಗೆ ಗೋಧಿ ಹಿಟ್ಟು ಮಾರಲು ನಿರಾಕರಿಸಿದವರಿಗೆ ಮೂರು ವರ್ಷದ ವರೆಗೆ ಶಿಕ್ಷೆ ಮತ್ತು ದಂಡ ವಿಧಿಸಲಾಗುವದೆಂದು ತಿಳಿಸಿರುವರು.

ತಾತಾನಗರದಲ್ಲಿ ರೈಲು ಚಕ್ರಗಳೂ, ಆಕ್ಸಿಲುಗಳೂ ತಯಾರ್ಮಾಡಲು ಹೊಸ ಕರ್ಮಾಗಾರವೊಂದನ್ನು ಸ್ಥಾಪಿಸಿರುವರು.

ಕಡಪಾದಲ್ಲಿ ಮುಸೀದಿ ಪ್ರಾಂತ್ಯದಲ್ಲಿಯೂ ಹಿಂದೂಗಳು ವಾದ್ಯಗಳೊಂದಿಗೆ ಹೋಗಲು ಹಕ್ಕು ಇರುವುದೆಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಶ್ರೀ ಸತ್ಯನಾರಾಯಣ ಪಂತಲುರವರು ತೀರ್ಮಾನವನ್ನು ಕೊಟ್ಟಿರುವರು.

ಇಂಡಿಯಾ ಸರಕಾರದವರು ಮುಂದಿನ ವರ್ಷ ಬಿ ಎ. ಡಬ್ಲ್ಯು. ರೈಲ್ವೆಯನ್ನು ಕೊಳ್ಳಲು ನಿರ್ಧರಿಸಿರುವರು 1945 ಕ್ಕೆ ಜಿ. ಐ. ಪಿ. ಮತ್ತು ಎಸ್ ಐ. ರೈಲ್ವೆಗಳ ಕಂಟ್ರಾಕ್ಟು ಕೂಡ ಮುಗಿಯುವದು

ತಿರುವೂರು ಸಮೀಪದಲ್ಲಿನ ಅಕ್ಕಸಾಲ್ಯ ವೆಂಬ ಗ್ರಾಮದಲ್ಲಿ ಒಬ್ಬ ಹುಡುಗನು 4 ಎತ್ತುಗಳನ್ನು ಹೊಲದಲ್ಲಿ ಮೇಯಿಸುತ್ತಿರುವಾಗ ಒಂದು ಚಿರತೆಯು ಬಂದು ಆ ಹುಡುಗನ ಮೇಲೆ ಬೀಳಲು ಆ ನಾಲ್ಕು ಎತ್ತುಗಳೂ ಹುಲಿಯನ್ನು ಕೊಂಬುಗಳಿಂದ ತಿವಿಯಲಾರಂಭಿಸಿದವು. ಹುಲಿಯು ಆ ಹುಡುಗನನ್ನು ಬಿಟ್ಟು ಎತ್ತುಗಳಲ್ಲೊಂದರ ಮೇಲೆ ಬೀಳಲು ಮಿಕ್ಕ ಮೂರು ಎತ್ತುಗಳೂ ಭಯಪಡದೆ ಚನ್ನಾಗಿ ತಿವಿಯಲಾರಂಭಿಸಲು ಅದು ಓಡಿಹೋಯಿತು. ಆ ಎತ್ತು ಮತ್ತು ಹುಡುಗನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಲಾಗುತ್ತಿದೆ.

ಅಮೇರಿಕಾ ಪ್ರೆಸಿಡೆಂಟರಾದ ರೂಜವೆಲ್ಟರು ಶತ್ರುವನ್ನು ಮಣ್ಣುಮುಕ್ಕಿಸಿ ಜಗತ್ತಿಗೆ ಚಿರ ಶಾಂತಿ ಮತ್ತು ಸ್ವಾತಂತ್ರ್ಯಗಳು ಲಭಿಸುವಂತೆ ಮಾಡುವದೇ ತಮ್ಮ ಯುದ್ಧದ ಗುರಿ ಮತ್ತು ಅದಕ್ಕೆ ಎಷ್ಟೇ ಕಷ್ಟನಷ್ಟಗಳೂ ಬಂದಿದರೂ ಅಡ್ಡಿಯಿಲ್ಲವೆಂದು ಸಾರಿರುವರು.

೧೧೨ ವರ್ಷ ಬದುಕಿದ ಗುಟ್ಟು?

ಹಠಯೋಗದ ಪ್ರಭಾವ

ಆಲ್ಫ್ರೆಡ್ ಚಾರ್ಲ್ಸ್ ಸುನೇಜ್ ಆರ್ನೋಲ್ಡ್ ಎಂಬವನು ೧೧೨ ವರ್ಷ ತುಂಬಿ ಕೆಳೆದ ತಿಂಗಳು ಲಿವರ್‌ಪೂಲಿನ ತನ್ನ ಮನೆಯಲ್ಲಿ ಮರಣ ಹೊಂದಿದನು. ಆತನು ತನ್ನ ದೀರ್ಘ ಜೀವನವು ಕಾಶಿಯ ಸಾಧುವೊಬ್ಬನಿಂದ ಕಲಿತ 'ಹಠಯೋಗ'ದ ಮಹಾತ್ಮೆಯಿಂದ ಎಂಬುದಾಗಿ ಎಂಬುವಾಗಿ ಹಿಂದೆ ಟೈಮ್ಸ್ ಪತ್ರಿಕೆಯಲ್ಲಿ ಲೇಖನ ಬರೆದಿದ್ದನು.

ಆಲ್ಫ್ರೆಡ್ ಪತ್ರಿಕಾ ವರದಿಗಾರನಾಗಿ ಕಳೆದ ಮಹಾಯುದ್ಧದ ಕಾಲದಲ್ಲಿ ಕಾಶಿಗೆ ಬಂದನು ಅಲ್ಲಿ ೧೪೭ ವರ್ಷ ಪ್ರಾಯದ ಚಕಾನಂದ ಸ್ವಾಮಿ ಎಂಬವರಿಂದ ಹಠಯೋಗವನ್ನು ಕಲಿತುಕೊಂಡನು.

ತಿರುಪತಿ ಮಹಾತ್ಮೆ

ಕೃಷ್ಣಾಜಿಲ್ಲಾ ದಿವಿ ತಾಲ್ಲೂಕು ಗುಡಿವಾಕ ಸಾಳ್ಯಂ ವಾಸಸ್ಥನಾದ ಗೋಪಯ್ಯನೆಂಬಾತನು 16 ವರ್ಷಗಳಿಗೆ ಹಿಂದೆ ತಿರುಪತಿಗೆ ಹೋಗಿಬಂದು ಒಂದು ಹಸುವಿನ ವಿಗ್ರಹವನ್ನು ಅಚ್ಚು ಹಾಕಿಸುವುದಾಗಿ ಹರಿಕೆ ಮಾಡಿಕೊಂಡಿದ್ದನಂತೆ. ಹಾಗೆ ಅವನು ಮಾಡಲಿಲ್ಲವಾದುದರಿಂದ ಅವನು ಮೂಕನಾದನು. 15 ವರ್ಷಗಳ ಕಾಲ ಮೂಕನಾಗಿಯೇ ಇದ್ದನು. ಕಣಿಯನ್ನು ಕೇಳಿದಾಗ ಹಸುವಿನ ವಿಗ್ರಹವನ್ನು ಅಚ್ಚು ಹಾಕಿಸಲಿಲ್ಲವಾಗಿ ಹೀಗಾಯಿತೆಂದು ಹೇಳುತ್ತಿದ್ದರಂತೆ. ಈಚೆಗೆ ಆತನು ಹರಿಕೆಯಂತೆ ಮಾಡಲು ಮಾತುಗಳು ಬಾಯಿಂದ ಹೊರಡುತ್ತಿವೆ ಈ ಕಲಿಗಾಲದಲ್ಲಿಯೇ ದೈವ ಮಹಿಮೆ ಇರುವದು ಜನರನ್ನು ಮುಗ್ಧರನ್ನಾಗಿ ಮಾಡಿದೆ.

'ಕಲೌ ವೆಂಕಟನಾಯಕಃ''

ಸತ್ಯವಾದಿ ವಾರ ಪತ್ರಿಕೆ

ತಿಂಗಳಿಗೆ ಚಂದಾ 0-1-3

ಮೈಸೂರು ನಗರದಲ್ಲಿ ಎಲ್ಲರಿಗೂ ಅನುಕೂಲವಾಗುವಂತೆ, ತಿಂಗಳುಗಟ್ಟಲೆ ಚಂದಾ ಮೇಲೆ "ಸತ್ಯವಾದಿ" ಯನ್ನು ಸರಬರಾಜು ಮಾಡಲು ಏರ್ಪಡಿಸಿದೆ. ತಿಂಗಳಿಗೆ 0-1-3 ಪತ್ರಿಕೆಯು ವಾರವಾದವೂ ನಿಮ್ಮ ಸ್ಥಳಗಳಿಗೆ ಕಳುಹಿಸಲಾಗುವುದು. ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿ.

ಹೆಚ್ಚು ವಿಷಯಗಳನ್ನು, ಚಾಮರಾಜಪುರದಲ್ಲಿರುವ ನಮ್ಮ ಆಫೀಸಿನಲ್ಲಾಗಲೀ, ಅಥವಾ ನಮ್ಮ ಸಿಟಿ ಏಜೆಂಟರು ಚಾಮರಾಜಪೇಟೆ ನೂರಡಿ ರಸ್ತೆಯಲ್ಲಿರುವ ಮೈಸೂರು ಸೈಕಲ್ ಮತ್ತು ನ್ಯೂಸ್‌ಪೇಪರ್ ಮಾರ್ಟ್ ರವರಿಂದಾಗಲಿ ತಿಳಿಯಬಹುದು.

ಶ್ರೀ ವಿದ್ಯಾರಣ್ಯ ಪಜಿಲ್ ನಂ. 4, ಬಳ್ಳಾರಿ.

ಪ್ರಥಮ ಬಹುಮಾನ	ರೂ ಪಾ ಯಿ	ಸ್ಪೆಷಲ್ ಬಹುಮಾನಗಳು
ಸರಿಯಾದ ಉತ್ತರವಿದ್ದವರಿಗೆ ರೂ. 400	800	ಒಂದೇ ಹೆಸರಿನಲ್ಲಿ 50 ಕ್ಕಿಂತಲು ಹೆಚ್ಚಿಗೆ ಕೂಪನ್ನು ಕಳುಹಿಸಿದವರಿಗೆ ತಲಾ ಒಂದು ಕನ್ನಡ ನಿಘಂಟು (ಗ್ರಂಥವು) ಬಹುಮಾನವಾಗಿ ಕೊಡಲಾಗುವದು
ಒಂದು ತಪ್ಪಿದ್ದವರಿಗೆ ರೂ. 150		
೨, ೩ ತಪ್ಪಿದ್ದವರಿಗೆ ರೂ. 100		
ಹೆಚ್ಚಿಗೆ ಕೂರ್ಪ ಕಳುಹಿಸಿದವರಿಗೆ ರೂ. 25	ಬ ಹು ಮಾ ನ	

ಇದಲ್ಲದೆ ಪ್ರೋತ್ಸಾಹನೆ ಬಹುಮಾನಗಳು

☞ ನಮ್ಮ ಪಜಲು ನಂ. 3 ಮೊದಲು 8 ರ ವರಿಗೂ ಭಾಗವಹಿಸಿ ಪ್ರತಿಯೊಂದರಲ್ಲಿಯೂ ಯಾವದೋ ಒಂದು ಬಹುಮಾನವನ್ನು ಪಡೆದವರಿಗೆ ರೂ. 200 ಪ್ರತ್ಯೇಕವಾಗಿ ಹಂಚಲಾಗುವದು

ಮುಕ್ತಾಯದ ದಿನ 3—1—42

ಸರಿಯಾದ ಉತ್ತರವನ್ನು 11—1—42 ರ ಪ್ರಜಾಮತದಲ್ಲಿ ಪ್ರಕಟಿಸಲಾಗುವದು.

5 ಕ್ಕಿಂತಲೂ ಕಡಿಮೆ ಕೂಪನ್ನುಗಳನ್ನು ಸ್ವೀಕರಿಸುವದಿಲ್ಲ. ಮುಕ್ತಾಯದ ದಿನ ನಿಮ್ಮ ಗ್ರಾಮದಲ್ಲಿ ಪೋಸ್ಟು ಮಾಡಬಹುದು

ಪ್ರವೇಶದ ರುಸುಮು

5 ಕೂಪನ್ನಿಗೆ ರೂ. 1—0—0

1 ಕೂಪನ್ನಿಗೆ ರೂ. 0—4—0

ಪ್ರೈಜ್ ಲೀಸ್ಟನ್ನು 14—1—42 ನೇ ದಿನ ಮೈಸೂರು "ಸತ್ಯವಾದಿ" ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. 0—1—0 ಸ್ಟ್ಯಾಂಪು ಹೆಚ್ಚಿಗೆ ಕಳುಹಿಸಿದವರಿಗೆ ನಂ. 5 ರ ಬಿಡಿ ಕೂಪನ್ನುಗಳು 10 ಪ್ರೈಜ್‌ಲಿಸ್ಟುಸೊಂದಿಗೆ ತಾ|| 10—1—42 ನೇ ದಿನ ನೇರವಾಗಿಯೂ ಕಳುಹಿಸಲಾಗುವುದು.

ಬಿಳೀ ಹಾಳೆಯ ಮೇಲೆ ಗೀರುಹಾಕಿ ಬರೆದು ಕಳುಹಿಸಬಹುದು.

ಬಿಡಿ ಕೂಪನ್ನುಗಳು ಬೇಕಾದವರು 20ಕ್ಕೆ 0—1—0 ಸ್ಟ್ಯಾಂಪು ಪ್ರಕಾರ ಕಳುಹಿಸಬೇಕು.

ಆಧಾರಗಳು ಎಡದಿಂದ ಬಲಕ್ಕೆ

1 ಗೆಳೆಯರ ಕೂಟದಲ್ಲಿ "—" ಕ್ಕಾಗಿ ಕೆಟ್ಟ ಮಾತುಗಳು ಹೊರಡುವುದುಂಟು. 3 ಹೆಚ್ಚಿನ "—" ಕ್ಕೆ ಗುರಿಯಾದವರು ಸಾಮಾನ್ಯವಾಗಿ ದುರ್ಬಲರಾಗಬಹುದು. 6 ಪ್ರಧಾನ ಮಂತ್ರಿ. 7 ನಾಲಿಗೆ. 8 ಇಂದ್ರಲೋಕ. 10 "—" ಇಲ್ಲದವನ ಜೀವನವು ದುಃಖದಾಯಕವಲ್ಲವೇ? 11 ಇವನಿಗೆ ಮಾತಾಡಲು ಬರುವುದಿಲ್ಲ. 12 "—" ಹೊಡೆಯುವವನು ಜಾಗ್ರತೆಯಾಗಿರಬೇಕು. 13 "ಉಗಿ" (ತಲೆ ಕೆಳಗಾಗಿದೆ). 16 ದಿನ. 18 ಚಿತ್ರ. 19 ಯೋಗ್ಯವಾದ "—" ವಿಲ್ಲದಂಥ ಗ್ರಾಮವನ್ನು ತ್ವರೆಯಾಗಿ ತ್ಯಜಿಸಬೇಕು. 20 "ನಗೆ" (ತಲೆಕೆಳಗಾಗಿದೆ). 24 "ಸಡಿಲು" (ಕಲೆ ಬೆರೆಕೆಯಾಗಿದೆ).



ಆಧಾರಗಳು ಮೇಲಿನಿಂದ ಕೆಳಕ್ಕೆ

1 ಈತನ ಆಶೀರ್ವಾದಗಳಿಂದ ನಮ್ಮ ಸಂಸ್ಥೆಯು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ 2 ಸ್ತ್ರೀಯರು "ಇದನ್ನು" ಹೂನಿನೊಡನೆ ಉಪಯೋಗಿಸುತ್ತಾರೆ. 3 ಶಾರದೆ. 4 ಮಂಗಳ ಸೂತ್ರ. 5 "—" ದಲ್ಲಿನ ಕಷ್ಟಗಳಿಗೆ ಹೆದರುವವರು ಬಹಳ ಕಡಮೆ. 9 "—" ನ ಕಾಲದ ಜನರೇ ಹೆಚ್ಚಿನ ಬುದ್ಧಿಶಾಲಿಗಳೆಂದು ಕೆಲವರ ಅಭಿಮತ. 12 ಸೌಂದರ್ಯ. 13 ವಾದ್ಯವಿಶೇಷ. 14 "—" ಗಳನ್ನು ಮಾಡುತ್ತಿತ್ತಾ ಕಾಂಗ್ರೆಸ್ಸಿನ ಭಕ್ತರು ಜನರ ಮೆಚ್ಚಿಗೆಯನ್ನು ಪಡೆದಿದ್ದಾರೆ. 15 ಈಗಿನ ಕಾಲದ ಸ್ತ್ರೀಯರ "—" ಯನ್ನು ನೋಡಿ ಅವರ ಸ್ವಭಾವವನ್ನು ತಿಳಿಯುವದು ಕಷ್ಟ. 17 ಸಾಗರ.

ಸೂಚನೆ:—ಎಲ್ಲರೂ ನಮ್ಮ ಸಂಸ್ಥೆಯ ನಿಬಂಧನೆಗಳಿಗೆ ಒಳಪಟ್ಟಿರಬೇಕು. ಈ ಪಜಿಲಿನ ಎಲ್ಲಾ ವಿಷಯದಲ್ಲೂ ಮ್ಯಾನೇಜರ್ ಮಾಡುವ ನಿರ್ಣಯವೇ ಕೊನೆಯದು. ವಾದ ವಿವಾದಕ್ಕೆ ಅಸ್ಪದವಿಲ್ಲ. ರುಸುಮು ಮತ್ತು ಕೂಪನ್ನುಗಳನ್ನು ಈ ಅಡ್ರೆಸ್ಸಿಗೆ ಕಳುಹಿಸಬೇಕು.

ಮ್ಯಾನೇಜರ್:—ವಿದ್ಯಾರಣ್ಯ ಪಜಿಲ್ಸ್, ಕಂಬಳಿ ಬಜಾರ್, ಬಳ್ಳಾರಿ.

ಪಜಿಲ್ ನಂ. ೩ ರ ಸರಿಯಾದ ಉತ್ತರ.

ಎಡದಿಂದ ಬಲಕ್ಕೆ— 1 ವಿದ್ಯಾರಣ್ಯ. 4 ಅರಸ (ಅರಸು) 5 ಮರನೆಲಿ. 7 ಅಸುರ. 9 ತಂತ್ರ. 11 ಸಿಹಿ, 13 ಮಾಲಾ (ಮಾಲೆ) 14 ಪವಿ. 17 ಋತಿ. 18 ಕಾರಾಗೃಹ 19 ಆಗಾರ. 20 ರಿಗಿಣೆ. 21 ನೆರಳು.

ಮೇಲಿನಿಂದ ಕೆಳಕ್ಕೆ— 1 ವಿರೋಧ. 2 ರಮಣಿ. 3 ಣ್ಯರಲಿ. 6 ಭಯ. 8 ರಂಭೆ. 10 ಅಪಕಾರಿ. 12 ಜಳಿ. 13 ಮಾಯಗಾರ. 15 ವಿರಾಗಿ, 16 ಗೃಹ, 19 ಆಸೆ.

ನಮ್ಮ ಪಜಿಲುಗಳಲ್ಲಿ ಸೊನ್ನೆ ಒಂದು ಅಕ್ಷರದಲ್ಲಿ ಲೆಕ್ಕ ಬರುತ್ತೆ. ಪ್ರತ್ಯುತ್ತರ ಬೇಕಾದವರು 0—1—3 ಸ್ಟ್ಯಾಂಪನ್ನು ಕಳುಹಿಸಬೇಕು.

ಪಜಿಲ್ ನಂ. 3 ರ ಬಹುಮಾನಗಳನ್ನು ತಾ || 28—12—41 ಕ್ಕೆ ಒಳಗಾಗಿ ಕಳುಹಿಸುತ್ತೇವೆ.

ಬಹುಮಾನಗಳಿಗಾಗಿ ಕಳುಹಿಸಿದ ನಮ್ಮ ಪಾವತಿಗಳನ್ನು ನೋಡಿ ಯಾರೂ ಅಸಮಾಧಾನ ಪಡುವ ಅವಶ್ಯವಿಲ್ಲ. ಪರತು ಕಳುಹಿಸಿದಲ್ಲಿ ಖರ್ಚನ್ನು ವಜಾಮಾಡಿ M. O. ಮುಖಾಂತರವೇ ಕಳುಹಿಸಲಾಗುವುದು. ಪಾವತಿಗಳು ಇದ್ದವರು ಒಂದು ರೂಪಾಯಿನೊಳಗಿನ ಹಣವನ್ನು ಕಾಲಾಣೆ, ಅರ್ಧಾಣೆಗಳ ಪೋಸ್ಟು ಸ್ಟ್ಯಾಂಪುಗಳನ್ನು ಕಳುಹಿಸಬಹುದು.

Suggestions to Commonsense Crossword No. 231

(Closing Date 8—1—1942)

Bankers and Alternatives

Across

1 Clue 4 World 7 Noon 8 Hair, Heir 9 Revue 10 Lemon 11 Clip 14 Coxy, Foxy, Doxy 15 Drain 18 Prize, Price, Pride, 20 Mean, Lean 21 Leowrf 24 Rot 25 Moon, Moan 27 Few, New 28 Purr 29 Tanks, Tales, Tasks, Talks, Taxes, Tarts 31 Ova 32 Old, Odd 33 Owe, Awe 34 Sell, Fell, Well, Hell, Cell.

Down

1 Cad 2 Enemy 3 Wound, Hound, Sound 5 Lisp, Limp 6 Dry 9 Rex 10 Log, Low 11 Caper 12 Lira 13 Ininresce 14 Cool, Fool, Foil, Dool 16 Cest, Rest, Test etc. 17 Yarn, Warn, Darn 19 Boor, Poor 22 Emu 23 Warm, Wary, Ward, Worm, Worn 26 Have, Save 28 Pro 29 Tow 30 Pal, Gal.

Interlockers

14 A.	14 D
Foxy, Coxy, Doxy	Cool, Fool, Foil, Dool

.....

25 A.	23 D.
Moan, Moon	Warm, Wary, Ward, Worm, Worn

[Our Selections, with Smart Comments if possible, will be published next week.]

For Luscious Menu and Fine Coffee and Tea

Sastry's Coffee Rooms

Chamarajapuram, Mysore

- PRINTING -

Neatly & Promptly Executed
Moderate Charges

The Satyavadi Press

Chamarajpuram, Mysore

Edited, Printed & published by M. S. Krishna Rao, at the Satyavadi Press, Chamaraja Agrahar, Mysore.

ಹಿಂದುಸ್ಥಾನದ



ಶುದ್ಧ ಗಂಧದ ಸಾಬೂನು

ಮೈಸೂರ್ ಸ್ಯಾಂಡಲ್‌ಸೋಪ್

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು

ಸತ್ಯವಾದಿ ವಾರ ಪತ್ರಿಕೆಯಲ್ಲಿ ನಿಮ್ಮ ಜಾಹಿರಾತುಗಳನ್ನು ಪ್ರಕಟಪಡಿಸಿ ಒಳ್ಳೇ ಲಾಭ ಸಂಪಾದಿಸಿರಿ

ಶೃಂಗಾರಪಾಪ ಪುಸ್ತಕ! ಮುದ್ದಾದ ಮುದ್ರಣ!!

ಸ್ತ್ರೀ ಪುರುಷರು ಪ್ರೀತಿಸುವ ಫೋಟೋಗಳು ಕೂಡಿದ

ಮದನಕಳಾಶಾಸ್ತ್ರ ಎಂಬ ಪ್ರೇಮ ರಹಸ್ಯಗಳು

ರೂ. ೧—೪—೦

ಈ ಪುಸ್ತಕವು ಕನ್ನಡ ಭಾಷೆಯಲ್ಲಿ ಲೇಡಿ ಫೋಟೋಗಳೊಡನೆ ಗ್ಲೇಜ್ ಕಾಗದದಲ್ಲಿ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖವಿಲಾಸಗಳು, ಸ್ತ್ರೀ ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಇಂಗ್ಲಿಷ್, ಫ್ರೆಂಚ್, ಅಮೇರಿಕ್, ಜರ್ಮ್, ಜಾವಾ, ಮಲಯ, ಸಯಾಂ, ಜಪರ್, ಬರ್ಮ್, ಇಂಡಿಯನ್ ಮೊದಲಾದ ದೇಶದ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ದೇಹಸೌಂದರ್ಯದ ಮರ್ಮಗಳು, ಇನ್ನು ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಮನಸು ಶೃಂಗಾರ ರಹಸ್ಯ ಫೋಟೋಗಳು ಅಡಗಿದೆ. ಇದುವರಿಗೂ ಕನ್ನಡ ಭಾಷೆಯಲ್ಲಿ ಇಷ್ಟು ಬಹಿರಂಗವಾಗಿ ಪ್ರಕಟಿಸಲಿಲ್ಲ. ಓದಿ ನೋಡಿದರೆ ಪುಸ್ತಕ ಮುಗಿಯುವವರಿಗೂ ಮೇಲಕ್ಕೇಳಲು ಮನಸ್ಸು ಬಾರದು. ಕ್ರಯ ಫೋಟೋಗಳ ಸಹಿತ ೩೦೦ ಪುಟಗಳು ಇರುವ ಪುಸ್ತಕ ರೂ. ೧—೪—೦.

THE AMERICAN SWISS TRADING Co.
Post Box No. 512
Park Town, Madras

ಅಮೆರಿಕನ್ ಸ್ವಿಸ್ ಟ್ರೇಡಿಂಗ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ. 512 :: ಪಾರ್ಕ್ ಟವುನ್, ಮದರಾಸು